# ಪ್ರಹಸನ ಪ್ರಸಂಗ

ಸ್ವಾಮಿ ವಿವೇಕಾನಂದರು ಆಗಿನ್ನೂ ಯುವಕರು. ೨೯-೩೦ ವಯಸ್ಸು, ಅಷ್ಟೆ. ಅವರು ಪಾಶ್ಚಾತ್ಯ ದೇಶಗಳಲ್ಲಿ ಭಾರತದ ಹಿರಿಮೆಯ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದರು. ಅಲ್ಲಿಯ ಜನರು ಅವರನ್ನು ಭಾರತದ ಬಗ್ಗೆ ಕುತೂಹಲ ಪ್ರಶ್ನೆಗಳನ್ನು ಕೇಳುತ್ತಿದ್ದರು. ಸ್ವಾಮೀಜಿ ಕೆಲವೊಮ್ಮೆ ಹಾಸ್ಯಮಯ ಉತ್ತರವನ್ನು ನೀಡುತ್ತಿದ್ದರು.

ಒಮ್ಮೆ ಯಾರೊ ಕೇಳಿದರು :'ಸ್ವಾಮೀಜಿ, ಭಾರತದಲ್ಲಿ ಯುವತಿಯರನ್ನು ಮುದುಕರಿಗೆ ವಿವಾಹ ಮಾಡಿಕೊಡುತ್ತಾರಂತೆ, ಹೌದೆ?'

ಸ್ವಾಮೀಜಿ : 'ಹೌದು, ನನ್ನಂತಹ ಯುವಕರೆಲ್ಲ ಸಂನ್ಯಾಸಿಗಳಾಗಿ ಬಿಡುತ್ತಾರೆ. ಇನ್ನು ಉಳಿದ ಮುದುಕರನ್ನೇ ಮದುವೆಯಾಗಬೇಕು!

*******

ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿದ್ದಾಗ ನಡೆದ ಘಟನೆ. ಅವರ ಅತ್ಯಂತ ನಿಕಟ ಪಾಶ್ಚಾತ್ಯ ಶಿಷ್ಯರೊಬ್ಬರು ಅವರ ಕಾಲು ಬೆರಳಿನ ಉಗುರನ್ನು ತೆಗೆಯುತ್ತಿದ್ದರು. ಇದೇ ಸಂದರ್ಭದಲ್ಲಿಯೇ ಪರಸ್ಪರ ಸಂಭಾಷಣೆಯೂ ನಡೆಯುತ್ತಿತ್ತು. ಶಿಷ್ಯರು ತಮ್ಮ ಕೆಲಸ ವನ್ನು ಮುಗಿಸಿದ ನಂತರ ಸ್ವಾಮೀಜಿಯವರ ಕಡೆ ತಿರುಗಿ ಮುಗು ಳ್ನಗುತ್ತ ಹೇಳಿದರು:

'ಸ್ವಾಮೀಜಿ, ನಾವು ಅಮೆರಿಕನರು. ನಾವು ಯಾವ ಕೆಲಸವನ್ನೂ ಬಿಟ್ಟಿ ಮಾಡುವುದಿಲ್ಲ. ಈಗ ನಿಮ್ಮ ಕಾಲುಗುರು ತೆಗೆದಿದ್ದಕ್ಕೆ ನೀವೇನು ಕೊಡುತ್ತೀರಿ?'

ಸ್ವಾಮೀಜಿ ಕೂಡ ಮುಗಳ್ನಗುತ್ತ ತಟ್ಟನೆ ಉತ್ತರಿಸಿದರು: 'ನಾನು ಭಾರತೀಯ ಸಾಧು. ಅಲ್ಲಿ ಸಾಧುಗಳ ಪಾದ ಮುಟ್ಟಿದರೆ ಕಾಣಿಕೆ (ಪ್ರಣಾಮಿ) ಕೊಡಬೇಕು.'

*******

ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿದ್ದಾಗ ಅಲ್ಲಿನ ಅನೇಕರು ಅವರನ್ನು ಬೌದ್ಧ ಸಂನ್ಯಾಸಿಗಳೆಂದು ತಿಳಿದಿದ್ದರು. ಬೌದ್ಧರನ್ನು ಇಂಗ್ಲಿಷ್‌ನಲ್ಲಿ *Buddhist* (ಬುದ್ಧಿಸ್ಟ್) ಎಂದು ಕರೆಯುತ್ತಾರೆ.

ಓರ್ವ ಮಹಿಳೆ ಸ್ವಾಮೀಜಿಯನ್ನು ನೋಡಿ ಅವರು ಬೌದ್ಧ ರಿರಬೇಕೆಂದು ಭಾವಿಸಿದಳು. ಆಕೆ *Buddhist* ಎಂಬ ಪದವನ್ನು ಸರಿಯಾಗಿ ಉಚ್ಚರಿಸಲು ಬಾರದೆ ಅವರನ್ನು ಕೇಳಿದಳು: 'ಸ್ವಾಮೀಜಿ, ನೀವು ಬಡ್ಡಿಸ್ಟರೆ (*Buddist*)? (*Bud*ಎಂದರೆ ಹೂವಿನ ಮೊಗ್ಗು).

ಸ್ವಾಮೀಜಿ ತುಂಟು ನಗೆ ಬೀರುತ್ತ ಹೇಳಿದರು:

'ಇಲ್ಲ, ನಾನು *Flowerist*! (ಅಂದರೆ ಹೂಮಾರುವವನು)

*******

ಸ್ವಾರ್ಥತೆ ಎಂಬುದು ಇಲ್ಲವಾದಾಗ, ನಮ್ಮ ಜೀವನ ವನ್ನು ಸಾಕ್ಷಿಯಾಗಿ ನೋಡಲು ಸಾಧ್ಯವಾದಾಗ ದುಃಖವೂ ಕೂಡ ಸುಖವಾಗುತ್ತದೆ.

ಸ್ವಾಮಿ ವಿವೇಕಾನಂದರು ತಮ್ಮ ಪಾಶ್ಚಿಮಾತ್ಯ ದೇಶಗಳ ಪ್ರವಾಸ ಕಾಲದಲ್ಲಿ ಭಾರತೀಯವಾದ ಪ್ರತಿಯೊಂದನ್ನೂ ವಹಿಸಿಕೊಂಡೇ ಮಾತನಾಡುತ್ತಿದ್ದರು. ಕ್ರೈಸ್ತ ಮಿಷನರಿಗಳು ಆ ದೇಶಗಳಲ್ಲಿ ಭಾರತದ ಬಗ್ಗೆ ಮಾಡುತ್ತಿದ್ದ ಅಪಪ್ರಚಾರದಿಂದ ವಿದೇಶೀಯರಿಗೆ ಭಾರತೀಯ ರೆಂದರೆ ಒಂದು ಅನಾಗರಿಕ ಜನಾಂಗ ಎಂದೇ ಕಲ್ಪನೆಯಿತ್ತು. ಆದರೆ ಸ್ವಾಮಿ ವಿವೇಕಾನಂದರ ಮುಂದೆ ಯಾರೇ ಆಗಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಭಾರತವನ್ನು ಹಿಯಾಳಿಸಿ ಮಾತಾಡಿದರೆ ತಮ್ಮ ಮಾತಿನ ಮೊನಚಿನ ಚುರುಕು ಮುಟ್ಟಿಸದೆ ಬಿಡುತ್ತಿರಲಿಲ್ಲ. ಒಮ್ಮೆ ಒಬ್ಬ ಆಂಗ್ಲ ಮಹಿಳೆಯೊಬ್ಬಳು,

'ಸ್ವಾಮೀಜಿ,ನೀವು ಇಷ್ಟೊಂದು ನಿಮ್ಮ ತಾಯ್ನಾಡಿನ ಬಗ್ಗೆ ಅಭಿಮಾನ ಇರುವವರು, ನಮ್ಮ ದೇಶದ ಬೂಡ್ಸು ಧರಿಸಿದ್ದೀರಲ್ಲಾ ಸರಿಯೇ' ಎಂದರು.

ತಕ್ಷಣ ಸ್ವಾಮೀಜಿಯವರ ಬಾಯಿಂದ ಬಾಣದಂತೆ ಉತ್ತರ ಬಂತು.

'ನಮ್ಮ ದೇಶದಲ್ಲಿ ಆಂಗ್ಲರಿಗೆ ಯಾವ ಸ್ಥಾನವಿದೆ ಎಂಬುದನ್ನು ತೋರಿಸುವುದಕ್ಕೆ!'

*******

ನೀವು ಧಾರ್ಮಿಕರಾಗುತ್ತಿರುವಿರಿ ಎನ್ನುವುದಕ್ಕೆ ಮೊದಲನೆ ಗುರುತೆ ನೀವು ಹೆಚ್ಚು ಉಲ್ಲಾಸಭರಿತ ರಾಗಿರುವುದು. ಒಬ್ಬ ಜೋಲು ಮುಖಹಾಕಿ ಕೊಂಡಿದ್ದರೆ ಅವನಿಗೆ ಏನೋ ಅಗ್ನಿಮಾಂದ್ಯ ವಿರಬಹುದೇ ಹೊರತು ಎಂದಿಗೂ ಅದು ಧಾರ್ಮಿ ಕತೆಯ ಕುರುಹಲ್ಲ.... ದುಃಖ ಪಾಪದಿಂದಾದುದು. ಮತ್ತಾವುದರಿಂದಲೂ ಅಲ್ಲ. ಹ್ಯಾಪುಮೋರೆ ಹಾಕಿ ಕೊಂಡಿರುವವರೊಡನೆ ನಿಮಗೇನು ಕೆಲಸ? ಅದು ಭಯಂಕರವಾದುದು. ಅಳುಮೋರೆ ಇದ್ದರೆ ಅಂದು ಹೊರಗೆ ಹೋಗಬೇಡಿ. ಕೋಣೆಯಲ್ಲೇ ಕುಳಿತು ಕೊಳ್ಳಿ. ಈ ರೋಗವನ್ನು ಪ್ರಪಂಚಕ್ಕೆ ಹರಡುವುದಕ್ಕೆ ನಿಮಗೆ ಯಾವ ಅಧಿಕಾರವಿದೆ?

ಸ್ವಾಮಿ ವಿವೇಕಾನಂದ